**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಗುಬ್ಬಿ**

ಉಪಸ್ಥಿತರು :- **ಶ್ರೀ ಕಿರಣ್ ಎಸ್.ಪಿ.,** ಬಿ.ಬಿ.ಎಂ., ಎಲ್.ಎಲ್.ಬಿ.,
ಪ್ರಧಾ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಗುಬ್ಬಿ.

**ದಿನಾಂಕ 27 ನೇ ಜುಲೈ 2026**

**ಸಿ.ಸಿ ನಂಬರ್ 28/2025**

ಪಿರ್ಯಾದುದಾರರು :- ಸರ್ಕಾರದ ಪರವಾಗಿ
ಚೇಳೂರು ಪೊಲೀಸರು

***(ಪ್ರತಿನಿಧಿಸುವವರು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)***

**- ವಿರುದ್ಧ -**

ಆರೋಪಿತರು :- ಕಾಂತರಾಜು ಸಿ.ಹೆಚ್.
ಬಿನ್ ಲೇಟ್ ಓಬಳಯ್ಯ ,
50 ವರ್ಷ,
ವಾಸಃ ಅಂತಪುರ ಗ್ರಾಮ,
ಚೇಳೂರು ಹೋಬಳಿ,
ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ.

***(ಪ್ರತಿನಿಧಿಸುವವರು ಶ್ರೀ. ಎಂ.ಪಿ.ಎಂ., ವಕೀಲರು)***

**ತೀರ್ಪು**

ಪ್ರಸ್ತುತ ತೀರ್ಪು ಚೇಳೂರು ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಆರೋಪಿತರು ಭಾರತೀಯ ನ್ಯಾಯ ಸಂಹಿತೆ ಕಲಂ 351(2) ಮತ್ತು 352 ಮತ್ತು ಕಲಂ 4 ಕರ್ನಾಟಕ ವಕೀಲರ ಮೇಲಿನ ಹಿಂಸಾಚಾರ ನಿಷೇಧ ಕಾಯ್ದೆ-2023 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಎಸಗಿರುತ್ತಾರೆಂದು ಸಲ್ಲಿಸಿದ ಅಂತಿಮ ವರದಿಯ ಮೇಲೆ ಉದ್ಭವವಾಗಿರುತ್ತದೆ.

**2. ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ,**

ದಿನಾಂಕ:03.11.2024 ರಂದು ಮಧ್ಯಾಹ್ನ 2.30 ಗಂಟೆ ಸಮಯದಲ್ಲಿ ಚೇಳೂರು ಠಾಣಾ ಸರಹದ್ದು ಗುಬ್ಬಿ ತಾಲ್ಲೂಕ್, ಚೇಳೂರು ಗ್ರಾಮದ ಚೇಳೂರು ಬಸ್

ಸ್ಟ್ಯಾಂಡ್ ನ CBN ಕಾಂಪ್ಲೆಕ್ಸ್ ನ 2ನೇ ಮಹಡಿಯಲ್ಲಿರುವ ಸಾಕ್ಷಿ-2 ರವರ ಲಲಿತಾ ಲೇಡಿಸ್ ಟೈಲರ್ ಅಂಗಡಿಗೆ ಆರೋಪಿ ರವರು ಬಂದು ಇದು ತಲೆಕಟ್ಟ ಲಾಯರ್ ಪ್ರವೀಣ್ ಗೌಡ ರವರ ಆಫೀಸ್ ಅಲ್ವಾ, ಅವರು ಇಲ್ಲಾ, ಅವನು ನನ್ನ ಕೇಸಿನ ಎದುರು ಲಾಯರ್ ಅವನಿಗೆ ಒಂದು ಗತಿ ಕಾಣಿಸುತ್ತೇನೆ, ಬೋಳಿ ಮಗ, ಸೂಳೆ ಮಗ, ಅವನಮ್ಮನಾಕ್ಯಾಯ, ಅವನ ಹೆಂಡತಿನಾಕ್ಯಾಯ, ನನ್ನ ಮೇಲೆ ಕೇಸು ನಡೆಸುತ್ತಾನಾ ಎಂದು ವಕೀಲರರಾಗಿರುವ ಸಾಕ್ಷಿ-1 ರವರಿಗೆ ಬೈದು ಕೊಲೆ ಬೆದರಿಕೆ ಹಾಕಿ ಆ ಮೂಲಕ ಆರೋಪಿತರು ಭಾರತೀಯ ನ್ಯಾಯ ಸಂಹಿತೆ ಕಲಂ 351(2) ಮತ್ತು 352 ಮತ್ತು ಕಲಂ 4 ಕರ್ನಾಟಕ ವಕೀಲರ ಮೇಲಿನ ಹಿಂಸಾಚಾರ ನಿಷೇಧ ಕಾಯ್ದೆ-2023 ರ ಆಪಾದಿತ ಕೃತ್ಯಗಳನ್ನು ಎಸಗಿರುತ್ತಾರೆಂಬುದು ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶವಾಗಿರುತ್ತದೆ.

**3.** ಅಭಿಯೋಜನಾ ದಾಖಲಾತಿಗಳನ್ನು ಪರಿಶೀಲಿಸಿದಾಗ ಘಟನೆಗೆ ಸಂಬಂಧಿಸಿದಂತೆ ಚಾಸಾ.1 ರವರು ಚಾಸಾ.7 ರವರ ಸಮಕ್ಷಮ ಪಿರ್ಯಾದನ್ನು ನೀಡಿದ್ದು ಅದರ ಆಧಾರದ ಮೇಲೆ ಪ್ರಕರಣವನ್ನು ದಾಖಲಿಸಿ ತನಿಖಾ ಪ್ರಕ್ರಿಯೆಗಳನ್ನು ಕೈಗೊಂಡು ಅಂತಿಮವಾಗಿ ಚಾಸಾ.7 ರವರು ಆರೋಪಿತಯ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿರುವುದನ್ನು ಗೋಚರವಾಗಿರುತ್ತದೆ.

**4.** ಅಭಿಯೋಜನಾ ದಾಖಲಾತಿಗಳನ್ನು ಸ್ವೀಕರಿಸಿದ ನಂತರ ಯಥಾಪ್ರಕಾರ ಅವುಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿರುತ್ತದೆ. ನಂತರ ಭಾರತೀಯ ನಾಗರೀಕ ಸುರಕ್ಷ ಸಂಹಿತಾ ಕಲಂ 210 ಕ್ಲಾಸ್ (1) (ಬಿ) ರಡಿಯಲ್ಲಿ ಆರೋಪಿತರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ 351(2) ಮತ್ತು 352 ಮತ್ತು ಕಲಂ 4 ಕರ್ನಾಟಕ ವಕೀಲರ ಮೇಲಿನ ಹಿಂಸಾಚಾರ ನಿಷೇಧ ಕಾಯ್ದೆ-2023 ರ ಅಪರಾಧಗಳಿಗೆ ಸಂಜ್ಞೇಯತೆಯನ್ನು ತೆಗೆದುಕೊಳ್ಳಲಾಗಿರುತ್ತದೆ.

**5.** ಆರೋಪಿತಯು ನ್ಯಾಯಾಲಯದಿಂದ ಜಾಮೀನನ್ನು ಪಡೆದುಕೊಂಡಿರುತ್ತಾರೆ. ನ್ಯಾಯಾಲಯದ ಸಮನ್ಸ್ ಗೆ ಪ್ರತಿಯಾಗಿ ಹಾಜರಾದ ಆರೋಪಿತರಿಗೆ ಭಾರತೀಯ ನಾಗರೀಕ ಸುರಕ್ಷ ಸಂಹಿತಾ ಕಲಂ 230 ರಲ್ಲಿ ಪ್ರತ್ಯಾಯೋಜಿಸಲಾಗಿರುವಂತೆ ಅಭಿಯೋಜನಾ ದಾಖಲಾತಿಗಳ ನಕಲನ್ನು ನೀಡಲಾಗಿರುತ್ತದೆ. ನಂತರ ಆರೋಪಿತರ ವಿರುದ್ಧ ಆರೋಪಣೆ ರಚಿಸಿ ಅವರಿಗೆ ತಿಳಿದ ಭಾಷೆಯಲ್ಲಿ ಓದಿ ವಿವರಿಸಲಾಗಿರುತ್ತದೆ. ಅರ್ಥೈಸಿಕೊಂಡ

ಆರೋಪಿತರು ತಾವು ತಪ್ಪನ್ನು ಎಸಗಿರುವುದಿಲ್ಲ, ಅಧಿವಿಚಾರಣೆಯಾಗಲಿ ಎಂದು ಉತ್ತರಿಸಿದ ಪರಿಣಾಮವಾಗಿ ಪ್ರಕರಣವನ್ನು ಅಧಿವಿಚಾರಣೆಗೆ ಕಾಯ್ದಿರಿಸಲಾಗಿರುತ್ತದೆ.

**6.** ಅಭಿಯೋಜನಾ ಪಕ್ಷವು ಆರೋಪಿತಯ ಮೇಲೆ ಹೊರಿಸಿರುವ ಆರೋಪಗಳನ್ನು ರುಜುವಾತು ಪಡಿಸುವ ನಿಟ್ಟಿನಲ್ಲಿ ಚಾಸಾ.1 ರವರನ್ನು ಪ್ರಾಸಾ.1 ಎಂದು ವಿಚಾರಣೆ ಮಾಡಿರುತ್ತಾರೆ. ಮೇಲ್ಕಂಡ ವಿಚಾರಣಾ ಕಾಲದಲ್ಲಿ ಎರಡು ದಸ್ತಾವೇಜುಗಳನ್ನು ನಿಪಿ.1 ಮತ್ತು ನಿಪಿ.2 ಎಂದು ನಿಶಾನೀಕರಿಸಲಾಗಿರುತ್ತದೆ.

**7.** ಪ್ರಾಸಾ.1 ರವರು ಪಿರ್ಯಾದಿ ಸಾಕ್ಷಿದಾರರಾಗಿದ್ದು, ಅವರು ತಮ್ಮ ಸಾಕ್ಷ್ಯದಲ್ಲಿ ಅಭಿಯೋಜನೆಯ ಪ್ರಕರಣದ ವಿರುದ್ಧವಾಗಿ ಸಾಕ್ಷ್ಯ ನೀಡಿರುವ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡಿದರೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಸಹಾಯವಾಗುವುದಿಲ್ಲವೆಂದು ಕಂಡು ಬಂದ ಕಾರಣ ನ್ಯಾಯಾಲಯವು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಉಳಿದ ಸಾಕ್ಷಿದಾರರುಗಳಿಗೆ ಸಮನ್ಸ್ ನೀಡಬೇಕೆಂಬ ಮನವಿಯನ್ನು ತಿರಸ್ಕರಿಸಲಾಗಿರುತ್ತದೆ.

**8.** ಅಭಿಯೋಜನೆಯ ಪ್ರಕರಣದ ಪ್ರಮುಖ ಸಾಕ್ಷಿದಾರರಾದ ಪ್ರಾಸಾ.1 ರವರು ಪ್ರತಿಕೂಲ ಸಾಕ್ಷ್ಯವನ್ನು ನೀಡಿರುವುದರಿಂದ ಭಾರತೀಯ ನಾಗರೀಕ ಸುರಕ್ಷ ಸಂಹಿತಾ ಕಲಂ 351 ರಡಿಯಲ್ಲಿ ಆರೋಪಿಯನ್ನು ಪ್ರಶ್ನಿಸಿ ಅವರ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ.

**9.** ಉಭಯ ಪಕ್ಷಕಾರರ ವಾದ ವಿವಾದಗಳನ್ನು ಆಲಿಸಲಾಯಿತು ಹಾಗೂ ಕಡತದ ಮೇಲಿರುವ ಎಲ್ಲಾ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಪರಿಣಾಮವಾಗಿ ಪ್ರಸ್ತುತ ಪ್ರಕರಣದ ಇತ್ಯರ್ಥಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತದೆ.

> **1.** ದಿನಾಂಕ:03.11.2024 ರಂದು ಮಧ್ಯಾಹ್ನ 2.30 ಗಂಟೆ ಸಮಯದಲ್ಲಿ ಚೇಳೂರು ಠಾಣಾ ಸರಹದ್ದು ಗುಬ್ಬಿ ತಾಲ್ಲೂಕ್, ಚೇಳೂರು ಗ್ರಾಮದ ಚೇಳೂರು ಬಸ್ ನಿಲ್ದಾಣದ ಸಿ.ಬಿ.ಎನ್. ಕಾಂಪ್ಲೆಕ್ಸ್ ನ 2ನೇ ಮಹಡಿಯಲ್ಲಿರುವ ಸಾಕ್ಷಿ-2 ರವರ ಲಲಿತಾ ಲೇಡಿಸ್ ಟೈಲರ್ ಅಂಗಡಿಗೆ ಆರೋಪಿ ಹೋಗಿ ಇದು ತಲೆಕೆಟ್ಟ ಲಾಯರ್ ಪ್ರವೀಣ್ ಗೌಡ ರವರ ಆಫೀಸ್ ಅಲ್ವಾ ಇಲ್ವಾ, ಅವನು ನನ್ನ ಕೇಸಿನ ಎದುರು ಲಾಯರ್ ಅವನಿಗೆ ಒಂದು ಗತಿ ಕಾಣಿಸುತ್ತೇನೆ

ಎಂದು ಕೊಲೆ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆಯ ಕಲಂ 351(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನಾ ಪಕ್ಷವು ನಿಸ್ಸಂಶಯವಾಗಿ ರುಜುವಾತು ಪಡಿಸಿರುತ್ತಾರೆಯೇ?

**2.** ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿ ಸಾಕ್ಷಿ-1 ರವರನ್ನು ಕುರಿತು ಬೋಳಿ ಮಗ, ಸೂಳೆ ಮಗ, ಅವನಮ್ಮನಾಕ್ಯಾಯ, ಅವನ ಹೆಂಡತಿನಾಕ್ಯಾಯ ಎಂದು ಅವಾಚ್ಯ ಶಬ್ದಗಳಿಂದ ಬೈದು, ಶಾಂತಿ ಭಂಗವನ್ನುಂಟು ಮಾಡಿದ್ದು, ಆ ಮೂಲಕ ಆರೋಪಿ ಭಾರತೀಯ ನ್ಯಾಯ ಸಂಹಿತೆ ಕಲಂ 352 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನಾ ಪಕ್ಷವು ನಿಸ್ಸಂಶಯವಾಗಿ ರುಜುವಾತು ಪಡಿಸಿರುತ್ತಾರೆಯೇ?

**3.** ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿ ಸಾಕ್ಷಿ -1 ರವರನ್ನು ಕುರಿತು ನನ್ನ ಮೇಲೆ ಕೇಸು ನಡೆಸುತ್ತಾನಾ ಎಂದು ವಕೀಲರರಾಗಿರುವ ಸಾಕ್ಷಿ -1 ರವರಿಗೆ ಬೈದು ಕೊಲೆ ಬೆದರಿಕೆ ಹಾಕಿ ಕಲಂ 4 ಕರ್ನಾಟಕ ವಕೀಲರ ಮೇಲಿನ ಹಿಂಸಾಚಾರ ನಿಷೇಧ ಕಾಯ್ದೆ-2023 ರ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನಾ ಪಕ್ಷವು ನಿಸ್ಸಂಶಯವಾಗಿ ರುಜುವಾತು ಪಡಿಸಿರುತ್ತಾರೆಯೇ?

**4.** ಏನು ಆದೇಶ?

**10.** ಮೇಲ್ಕಂಡ ಅಂಶಗಳಿಗೆ ಸಂಬಂಧಿಸಿದಂತೆ ಅಭಿಯೋಜನಾ ಪಕ್ಷವು ಕಡತದ ಮೇಲೆ ಹಾಜರು ಪಡಿಸಿರುವ ಸಾಕ್ಷಿದಾರರ ಮೌಖಿಕ ಸಾಕ್ಷ್ಯ ಹಾಗೂ ದಸ್ತಾವೇಜು ಸಾಕ್ಷ್ಯಗಳನ್ನು ಪರಾಮರ್ಶೆ ಮಾಡಿದೆ. ಆ ಪರಿಣಾಮವಾಗಿ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿರುತ್ತದೆ.

| | | |
|---|---|---|
| **ಅಂಶ 1** | **:-** | **ನಕಾರಾತ್ಮಕವಾಗಿ,** |
| **ಅಂಶ 2** | **:-** | **ನಕಾರಾತ್ಮಕವಾಗಿ,** |
| **ಅಂಶ 3** | **:-** | **ನಕಾರಾತ್ಮಕವಾಗಿ,** |
| **ಅಂಶ 4** | **:-** | **ಅಂತಿಮ ಆದೇಶದಂತೆ, ಈ ಕೆಳಕಂಡ** |

## ಕಾರಣಗಳು

**11.** **ಅಂಶ 1 ರಿಂದ 3:-** ಈ ಮೂರು ಅಂಶಗಳನ್ನು ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸಲು ಒಟ್ಟಿಗೆ ತೆಗೆದುಕೊಳ್ಳಲಾಗಿರುತ್ತದೆ.

**12.** ಆರೋಪಿಯು ಘಟನಾ ದಿವಸ, ಘಟನಾ ಸ್ಥಳದಲ್ಲಿ, ಘಟನಾ ಸಮಯದಲ್ಲಿ ಆಪಾಧಿತ ಕೃತ್ಯಗಳನ್ನು ಚಾಸಾ.1 ರವರ ವಿರುದ್ದ ಎಸಗುವುದರ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 351(2) ಮತ್ತು 352 ಮತ್ತು ಕಲಂ 4 ಕರ್ನಾಟಕ ವಕೀಲರ ಮೇಲಿನ ಹಿಂಸಾಚಾರ ನಿಷೇಧ ಕಾಯ್ದೆ-2023 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಎಸಗಿರುತ್ತಾರೆಂಬುದು ಅಭಿಯೋಜನೆಯ ಸ್ಪಷ್ಟ ನಿಲುವಾಗಿರುತ್ತದೆ.

**13.** ಕ್ರಿಮಿನಲ್ ಪ್ರಕ್ರಿಯಾ ತತ್ವದ ಅಡಿಯಲ್ಲಿ ಆರೋಪಿಯ ಮೇಲೆ ಹೊರಿಸಿರುವ ಆಪಾದನೆಗಳ ಎಲ್ಲಾ ಘಟಕಾಂಶಗಳನ್ನು ನಿಸ್ಸಂಶಯವಾಗಿ ರುಜುವಾತು ಪಡಿಸುವ ಹೊಣೆ ಅಭಿಯೋಜನೆಯದ್ದಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನಾ ಪಕ್ಷವು ತನ್ನ ಮೇಲಿರುವ ಪ್ರಮುಖ ಹೊಣೆಯನ್ನು ರುಜುವಾತು ಪಡಿಸುವ ನಿಟ್ಟಿನಲ್ಲಿ ಪ್ರಾಸಾ.1 ರವರ ಮೌಖಿಕ ಸಾಕ್ಷ್ಯ ಹಾಗೂ ನಿಪಿ.1 ಮತ್ತು 2 ರ ದಸ್ತಾವೇಜು ಸಾಕ್ಷ್ಯಗಳನ್ನು ಕಡತದ ಮೇಲೆ ತಂದಿರುತ್ತಾರೆ.

**14.** ಪ್ರಸ್ತುತ ಪ್ರಕರಣದಲ್ಲಿ ಚರ್ಚಿಸಬೇಕಾದ ಪ್ರಮುಖ ಅಂಶವೇನೆಂದರೆ ಈ ಪ್ರಕರಣವನ್ನು ಚಾಸಾ.1 ಪ್ರವೀಣ್ ಎಸ್.ಆರ್. ರವರು ನೀಡಿದ ಪ್ರಥಮ ವರ್ತಮಾನ ವರದಿಯ ಆಧಾರದ ಮೇಲೆ ದಾಖಲು ಮಾಡಲಾಗಿರುತ್ತದೆ. ಈ ಪ್ರಕರಣದಲ್ಲಿ ಅಭಿಯೋಜನೆಯವರು ಹಾಜರು ಪಡಿಸಿರುವ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯಗಳನ್ನು ಸಂಕ್ಷಿಪ್ತವಾಗಿ ಪರಿಶೀಲಿಸಿದಾಗ ಚಾಸಾ.1 ರವರು ಪಿರ್ಯಾದಿ ಸಾಕ್ಷಿದಾರರಾಗಿದ್ದು, ಅವರನ್ನು ಪ್ರಾಸಾ.1 ಎಂದು ವಿಚಾರಣೆ ಮಾಡಿದ್ದು, ಅವರು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣೆಯಲ್ಲಿ ಆರೋಪಿಯು ವಾದಿಯಾಗಿ ದಾವಾ ಸಲ್ಲಿಸಿದ್ದ ಸಿವಿಲ್ ಪ್ರಕರಣದಲ್ಲಿ ತಾನು 3ನೇ ಪ್ರತಿವಾದಿಯ ಪರ ವಕೀಲನಾಗಿರುತ್ತೇನೆ. ಸದರಿ ದಾವಾಕ್ಕೆ ಸಂಬಂಧಿಸಿದಂತೆ ಆರೋಪಿಯ ಮತ್ತು ತನ್ನ ನಡುವೆ ಕೇವಲ ಬಾಯಿ ಮಾತಿನಲ್ಲಿ ಮಾತುಕತೆಯಾಗಿತ್ತು. ಆ ಸಮಯದಲ್ಲಿ ಪೋಲೀಸರು ಕೆಲವು ದಾಖಲಾತಿಗಳಿಗೆ ಸಹಿಯನ್ನು ಪಡೆದಿದ್ದರು. ಆರೋಪಿಯ ವಿರುದ್ಧ ದೂರನ್ನು ನೀಡುವ ಇಚ್ಚೆ ತನಗೆ ಇರಲಿಲ್ಲ. ಆರೋಪಿಯು ಕೂಡ ಚೇಳೂರಿನ ಹತ್ತಿರದ ಊರಿನವರಾಗಿದ್ದು, ಸಮಾಜದಲ್ಲಿ ಸ್ವಾಸ್ಥ್ಯ ಕಾಪಡುವ ಉದ್ದೇಶದಿಂದ ಆರೋಪಿಯು ತನ್ನ ಬಳಿ ಬಂದು ಕ್ಷೇಮೆ ಕೇಳಿರುತ್ತಾರೆ. ತಾನು ಕೂಡ ಈ ಪ್ರಕರಣವನ್ನು ಮುಂದುವರೆಸಲು ಇಚ್ಚಿಸುವುದಿಲ್ಲ, ಕಾರಣ ಆರೋಪಿಯು ಕೂಡ ತಮ್ಮ ಹತ್ತಿರದ ಊರಿನ ನಿವಾಸಿಯಾಗಿದ್ದು, ಮುಂದೆ ಯಾವುದೇ ಪರಿಣಾಮಗಳು ಆಗದೇ ಇರಲೀ ಎಂದು ಮತ್ತು ಸಮಾಜದಲ್ಲಿ ಶಾಂತಿ

ಕಾಪಡುವ ಉದ್ದೇಶದಿಂದ ಈ ಪ್ರಕರಣವನ್ನು ರಾಜೀ ಮಾಡಿಕೊಳ್ಳಲು ಇಚ್ಚಿಸಿರುತ್ತೇನೆ. ಆರೋಪಿಯು ತನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಕೊಲೆ ಬೆದರಿಕೆ ಹಾಕಿಲ್ಲ, ವೃತ್ತಿ ನಿಂಧನೆ ಮಾಡಿರುವುದಿಲ್ಲ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ- 1(ಎ) ಎಂದು ಗುರುತಿಸಲಾಗಿರುತ್ತದೆ. ತಾನು ಪೋಲೀಸರ ಮುಂದೆ ಯಾವುದೇ ಮುಂದುವರೆದ ಹೇಳಿಕೆಯನ್ನು ನೀಡಿರುವುದಿಲ್ಲ ಎಂದು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುತ್ತಾರೆ.

**15.** ಪ್ರಾಸಾ.1 ರವರು ಅಭಿಯೋಜನೆಯ ಪ್ರಕರಣದ ಅತಿಮುಖ್ಯ ಸಾಕ್ಷಿದಾರರಾಗಿದ್ದು, ಅಭಿಯೋಜನೆಯ ಪ್ರಕರಣದ ವಿರುದ್ಧವಾಗಿ ಸಾಕ್ಷ್ಯವನ್ನು ನುಡಿದಿದ್ದು, ಸದರಿ ಸಾಕ್ಷಿದಾರರನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗಲೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಸಹಾಯವಾಗುವಂತಹ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಆದ ಕಾರಣ ಆರೋಪಿಯು ಮೇಲ್ಕಂಡ ಅಪರಾಧಗಳನ್ನು ಎಸಗಿರುತ್ತಾನೆಂದು ಸಾಬೀತುಪಡಿಸಲು ಯಾವುದೇ ಸಾಕ್ಷಿ ಆಧಾರಗಳು ಇರುವುದಿಲ್ಲ.

**16.** ಪ್ರಾಸಾ.1 ರವರು ಪಿರ್ಯಾದಿ ಸಾಕ್ಷಿದಾರರಾಗಿದ್ದು, ಅಭಿಯೋಜನೆಯ ಅತಿಮುಖ್ಯ ಮತ್ತು ಪ್ರಮುಖ ಸಾಕ್ಷಿದಾರರಾಗಿದ್ದು ಅಭಿಯೋಜನೆಯ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡಿದರೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಸಹಾಯವಾಗುವುದಿಲ್ಲವೆಂದು ಕಂಡು ಬಂದ ಕಾರಣ ನ್ಯಾಯಾಲಯವು ಸಹಾಯಕ ಸರ್ಕಾರಿ ಅಭಿಯೋಜಕರ ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡಬೇಕೆಂಬ ಮನವಿಯನ್ನು ತಿರಸ್ಕರಿಸಲಾಗಿರುತ್ತದೆ.

**17.** ಈ ಎಲ್ಲಾ ಕಾರಣಗಳಿಂದ ವಿಚಾರಣೆ ಮಾಡಿರುವ ಪ್ರಾಸಾ.1 ರವರ ಸಾಕ್ಷಿ ವಿಚಾರಣೆ ಅಭಿಯೋಜನಾ ಪಕ್ಷದವರಿಗೆ ತಮ್ಮ ಪ್ರಕರಣವನ್ನು ರುಜುವಾತು ಪಡಿಸಲು ಯಾವುದೇ ರೀತಿ ಸಹಕಾರಿಯಾಗದೇ ಇರುವುದರಿಂದ ಅಭಿಯೋಜನಾ ಪಕ್ಷದವರು ಆರೋಪಿಯ ವಿರುದ್ಧ ಮಾಡಿರುವ ಆರೋಪಗಳನ್ನು ರುಜುವಾತು ಪಡಿಸಲು ವಿಫಲರಾದ ಕಾರಣ ಮೇಲ್ಕಂಡ 1 ರಿಂದ 3ನೇ ಅಂಶಗಳಿಗೆ **ನಕಾರಾತ್ಮಕವಾಗಿ** ಉತ್ತರಿಸಿರುತ್ತೇನೆ.

**18.** **<u>ಅಂಶ - 4</u> :-** ಮೇಲೆ ಚರ್ಚಿಸಲಾದ ಎಲ್ಲಾ ಯುಕ್ತ ಕಾರಣಗಳ ಪರಿಣಾಮವಾಗಿ ಈ ಕೆಳಕಂಡಂತೆಃ

**<u>ಆದೇಶ</u>**

ಭಾರತೀಯ ನ್ಯಾಯ ಸಂಹಿತೆ ಕಲಂ 351(2), 352 ಮತ್ತು ಕಲಂ 4 ಕರ್ನಾಟಕ ವಕೀಲರ ಮೇಲಿನ ಹಿಂಸಾಚಾರ ನಿಷೇಧ ಕಾಯ್ದೆ-2023 ರ ರೀತ್ಯಾ ಆರೋಪಿಯು ಅಪರಾಧವನ್ನು ಎಸಗಿಲ್ಲವೆಂದು ಕಂಡು ಬಂದಿರುವ ಕಾರಣ ಆರೋಪಿಯನ್ನು ದೋಷಮುಕ್ತನೆಂದು ಪರಿಗಣಿಸಿ ಭಾರತೀಯ ನಾಗರೀಕ ಸುರಕ್ಷ ಸಂಹಿತಾ ಕಲಂ 271(1) ರಡಿಯಲ್ಲಿ ಬಿಡುಗಡೆ ಮಾಡಲು ಆದೇಶಿಸಲಾಗಿದೆ.

ಆರೋಪಿಯ ಜಾಮೀನಿನ ಬಾಂಡು ಮತ್ತು ಮುಚ್ಚಳಿಕೆಯು ಭಾರತೀಯ ನಾಗರೀಕ ಸುರಕ್ಷ ಸಂಹಿತಾ ಕಲಂ 481 ರಡಿಯಲ್ಲಿ 6 ತಿಂಗಳವರೆಗೆ ಜಾರಿಯಲ್ಲಿರುತ್ತದೆ.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ಅವರು ಲಿಪ್ಯಂತರಿಸಿ, ಗಣಕೀಕೃತವಾದ ನಂತರ ತಿದ್ದುಪಡಿ ಮಾಡಿ, ತೆರೆದ ನ್ಯಾಯಾಲಯದಲ್ಲಿ **ದಿನಾಂಕ 27ನೇ ಜುಲೈ 2026** ರಂದು ಘೋಷಿಸಲಾಯಿತು)

ಸಹಿ/-
**(ಶ್ರೀ ಕಿರಣ್ ಎಸ್.ಪಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಗುಬ್ಬಿ .**

**<u>:: ಅನುಸೂಚಿ ::</u>**

**<u>ಅಭಿಯೋಜನೆಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ</u>**

ಪ್ರಾ.ಸಾ.1 : ಪ್ರವೀಣ್ ಎಸ್.ಆರ್.

**<u>ಅಭಿಯೋಜನೆಯ ಪರ ಗುರುತಿಸಿಕೊಂಡ ದಾಖಲಾತಿಗಳ ಪಟ್ಟಿ</u>**

ನಿ.ಪಿ-1 : ದೂರು
ನಿ.ಪಿ-2 : ಹೇಳಿಕೆ

**<u>ಆರೋಪಿಗಳ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ</u>**

--ಇಲ್ಲ--

**ಆರೋಪಿಗಳ ಪರ ಗುರುತಿಸಿಕೊಂಡ ದಾಖಲಾತಿಗಳ ಪಟ್ಟಿ**

**--**ಇಲ್ಲ**--**

**ಅಭಿಯೋಜನೆಯ ಪರ ಗುರುತಿಸಿಕೊಂಡ ಮುದ್ದೆ ಮಾಲುಗಳ ಪಟ್ಟಿ**

**--**ಇಲ್ಲ**--**

ಸಹಿ/-
**(ಶ್ರೀ ಕಿರಣ್ ಎಸ್.ಪಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಗುಬ್ಬಿ .**